ಚಿಣ್ಣರ ಚಾವಡಿ

# ಕೋತಿ ಶಾಪ ಮಂತ್ರಿ ತಂತ್ರ

## ವಸುಂಧರಾ ಕದಲೂರು

ಕಲೆ: ಗಣೇಶ ಆಚಾರ್ಯ

ಒಂದೂರಿನಲ್ಲಿ ಒಬ್ಬ ರಾಜನಿದ್ದ. ಆತನಿಗೆ ಒಂದು 'ಕೋತಿಶಾಪ' ಇತ್ತು. 'ಕೋತಿಶಾಪ' ಏನೆಂದರೆ, ಒಮ್ಮೆ ಬೇಟೆಗೆಂದು ಆ ರಾಜ ಕಾಡಿಗೆ ಹೋಗಿದ್ದಾಗ ತನ್ನ ಗುರಿಗೆ ಅಡ್ಡ ಬಂದು ತರಲೆ ಮಾಡುತ್ತಿದ್ದ ಒಂದು ಮರಿಕೋತಿಯ ಬಾಲವನ್ನು ಕತ್ತರಿಸಿದ್ದ. ಬಾಲ ಕತ್ತರಿಸಿದ ಕೋತಿ ನರಳುತ್ತ ಅಮ್ಮನೆಡೆಗೆ ಓಡಿತು. ಬಾಲ ಕತ್ತರಿಸಿಕೊಂಡು ನೋವಿನಿಂದ ಒದ್ದಾಡುತ್ತಿದ್ದ ತನ್ನ ಮರಿಯನ್ನು ಕಂಡು ಅಮ್ಮ ಕೋತಿಗೆ ಕೋಪ ಬಂದು, 'ನನ್ನ ಮಗುವಿನ ಬಾಲ ಕತ್ತರಿಸಿರುವ ರಾಜನ ಮಗನಿಗೆ ಬಾಲ ಬೆಳೆಯಲಿ' ಎಂದು ಶಾಪ ಕೊಟ್ಟಿತು.

ಎಷ್ಟೋ ವರ್ಷಗಳ ನಂತರ ರಾಜನಿಗೆ ಪುತ್ರಯೋಗ ದೊರಕಿತ್ತು. ಮದುವೆಯಾದ ಅನೇಕ ವರ್ಷಗಳ ತರುವಾಯ ಮಹಾರಾಣಿ ಮೊದಲ ಹೆರಿಗೆಗೆ ತವರಿಗೆ ಹೋಗಿದ್ದಳು. ಹೀಗಾಗಿ, ಕೋತಮ್ಮನ ಶಾಪದಿಂದ ರಾಜ ನಡುಗಿ ಹೋದ. ಕೋತಮ್ಮನ ಕಾಲು ಮುಟ್ಟಿ, 'ತಪ್ಪಾಯ್ತು, ಕ್ಷಮಿಸು ಕೋತಮ್ಮ, ನನ್ನ ಮಗ ಈ ರಾಜ್ಯದ ಮುಂದಿನ ಮಹಾರಾಜ. ಇದು ನಾನು ಮಾಡಿರುವ ತಪ್ಪು. ಹಾಗಾಗಿ, ನನಗೆ ಶಿಕ್ಷೆ ಕೊಡು. ಮಗುವಿಗೆ ಬೇಡ' ಎಂದು ಬೇಡಿಕೊಂಡ.

ಕೋತಮ್ಮನೂ ಒಂದು ಅಮ್ಮನಲ್ಲವೇ? ಹಾಗಾಗಿ, ರಾಜನ ಬೇಡಿಕೆಯನ್ನು ಒಪ್ಪಿಕೊಂಡು, 'ಬಾಲ ರಾಜನಿಗೆ ಬೆಳೆಯಲಿ, ರಾಜಕುಮಾರನಿಗೆ ಬೇಡ.' ಎಂದು ಶಾಪವನ್ನು ತಿದ್ದುಪಡಿ ಮಾಡಿತ್ತು. ರಾಜ ತನಗೆ ಬಾಲ ಬೆಳೆಯುವ ಬಗ್ಗೆ ಅರ್ಧ ಬೇಸರದಿಂದ ಹಾಗೂ ರಾಜಕುಮಾರನಿಗೆ ಬಾಲ ಬೆಳೆಯದಿರುವ ಬಗ್ಗೆ ಅರ್ಧ ಸಮಾಧಾನದಿಂದ ಅರಮನೆಗೆ ಮರಳಿದ.

ಈ ಘಟನೆಯಿಂದ ರಾಜ ಕುಸಿದು ಹೋದ. ಈ ಸಂಗತಿಯನ್ನು ಯಾರ ಬಳಿಯೂ ಹೇಳಿಕೊಳ್ಳುವ ಹಾಗಿಲ್ಲ. ಬಿಡುವ ಹಾಗೆಯೂ ಇಲ್ಲ. ಹಾಗಾಗಿ, ರಾಜ ಯಾರೊಡನೆಯೂ ಮಾತನಾಡದೆ, ರಾಜ್ಯದ ಯಾವ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸದೆ, ಆಸ್ಥಾನದ ಸಭೆಗಳನ್ನು ಮಾಡದೆ ಅರಮನೆಯ ತನ್ನ ಕೊಠಡಿಯೊಳಗೆ ಸುಮ್ಮನೆ ಉಳಿದು ಬಿಟ್ಟ.

ಮಂತ್ರಿ, ಸೇನಾಪತಿ, ಕೋಶಾಧಿಪತಿ, ರಾಜವೈದ್ಯ, ರಾಜಗುರುಗಳು ಹೀಗೆ ಎಲ್ಲರಿಗೂ ಆಶ್ಚರ್ಯದ ಜೊತೆಗೆ ಕಳವಳಪಟ್ಟರು. ರಾಣಿಯನ್ನಾದರೂ ಕೇಳೋಣ ಎಂದರೆ ಅವರು ಹೆರಿಗೆಗೆಂದು ತವರಿಗೆ ತೆರಳಿದವರು ರಾಜಕುಮಾರ ಸ್ವಲ್ಪ ದೊಡ್ಡವನಾಗಲೆಂದು ಅಲ್ಲಿಯೇ ಉಳಿದಿದ್ದಾರೆ. ರಾಜಮಾತೆಯವರಿಗೆ ವಯಸ್ಸಾಗಿದ್ದು, ಆರೋಗ್ಯ ಸಮಸ್ಯೆ ಇದೆ. ರಾಜ ಹೀಗೆ ರಾಜ್ಯಾಡಳಿತದ ಮೇಲಿನ ಆಸಕ್ತಿಯನ್ನೂ ಕಳೆದುಕೊಂಡು ಕೋಣೆ ಸೇರಿರುವ ಬಗ್ಗೆ ಪರರಾಜ್ಯದ ಗೂಢಚಾರಿಗಳಿಗೆ ತಿಳಿದರೆ ಅನಾಹುತ ಆಗುವುದು ಎಂದು ಅವರೆಲ್ಲಾ ಚಿಂತಿತರಾದರು.

ಮಂತ್ರಿ ಹೇಗಾದರೂ ಮಾಡಿ ರಾಜನನ್ನು ಹೊರಗೆ ಕರೆತರುವ ಉಪಾಯಕ್ಕಾಗಿ ಚಿಂತಿಸಿದ. ಆಗ ಮಂತ್ರಿಗೆ ಒಂದು ಉಪಾಯ ಹೊಳೆಯಿತು. ಕೂಡಲೇ ತವರೂರಿನಲ್ಲಿದ್ದ ಮಹಾರಾಣಿ ಹಾಗೂ ರಾಜಕುಮಾರರನ್ನು ಕರೆತರಲು ಒಂದು ಸುಸಜ್ಜಿತ